# ಕರ್ನಾಟಕ ವಿಧಾನ ಪರಿಷತ್ತು

**ಸದಸ್ಯರ ಹೆಸರು** : **ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು)**
**ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ** : **709**
**ಉತ್ತರಿಸಬೇಕಾದ ದಿನಾಂಕ** : **21.02.2024**
**ಉತ್ತರಿಸಬೇಕಾದ ಸಚಿವರು** : **ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು.**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| **ಅ** | ಕೋಲಾರ ಜಿಲ್ಲೆಯಲ್ಲಿ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದ್ದಲ್ಲಿ, ಈ ವರ್ಷ ಎಷ್ಟು ಪ್ರಮಾಣದಲ್ಲಿ ಹಾಲು ಉತ್ಪಾದನೆಯು ಕಡಿಮೆಯಾಗಿರುತ್ತದೆ; | ಕೋಲಾರ ಜಿಲ್ಲೆಯಲ್ಲಿ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಲ್ಲಿ ಹಾಲು ಉತ್ಪಾದನೆ ಕಡಿಮೆಯಾಗಿರುವುದಿಲ್ಲ. 2022-23ನೇ ಸಾಲಿಗೆ ಹಾಲು ಶೇಖರಣೆ ಸರಾಸರಿ 5,07,745 ಲಕ್ಷ ಲೀಟರ್ ಇದ್ದು, ಜನವರಿ-2024ರ ಅಂತ್ಯಕ್ಕೆ 5,71,541 ಲಕ್ಷ ಲೀಟರ್ ಇರುತ್ತದೆ. |
| **ಆ** | ಹೈನುಗಾರಿಕೆಯಲ್ಲಿ ತೊಡಗಿರುವ ರೈತರಿಗೆ ಹಾಲು ಉತ್ಪಾದನೆಯ ದರಗಳು ಪ್ರಸ್ತುತ ಬರ ಪರಿಸ್ಥಿತಿಯಿಂದ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| **ಇ** | ಈ ರೀತಿ ಹಾಲು ಉತ್ಪಾದನಾ ದರಗಳು ಹೆಚ್ಚಾಗಿರುವುದರಿಂದ, ಹಾಲು ಖರೀದಿ ದರಗಳನ್ನು ಏರಿಕೆ ಮಾಡಿ, ರೈತರ ಸಂಕಷ್ಟಕ್ಕೆ ನಿಲ್ಲಲು ಸರ್ಕಾರಕ್ಕೆ ಇರುವ ತೊಂದರೆಗಳೇನು; | ದಿನಾಂಕ:01.08.2023 ರಿಂದ ರಾಜ್ಯ ಸರ್ಕಾರವು ಪ್ರತಿ ಲೀಟರ್ ಹಾಲಿಗೆ ಮಾರಾಟ ದರವನ್ನು ರೂ.3/- ಗಳಿಗೆ ಹೆಚ್ಚಿಸಿದ್ದು, ಈ ಹೆಚ್ಚಿಸಿರುವ ಪೂರ್ಣ ಮೊತ್ತವನ್ನು ಉತ್ಪಾದಕರಿಗೆ ಪಾವತಿಸಲಾಗುತ್ತಿದೆ. (ಹಾಲಿನ ಖರೀದಿ ದರ) |
| **ಈ** | ಸರ್ಕಾರದ ಸ್ವಾಯತ್ತತೆ ಹಾಲು ಉತ್ಪಾದಕರ ಸಂಘಗಳು ಮತ್ತು ಖಾಸಗಿ ಹಾಲು ಡೇರಿಗಳು ಹಾಲು ಖರೀದಿ ದರಗಳಲ್ಲಿರುವ ವ್ಯತ್ಯಾಸವು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವ್ಯತ್ಯಾಸವನ್ನು ಸರಿದೂಗಿಸಲು ಸರ್ಕಾರ ಗಮನಹರಿಸಿದೆಯೇ? | ಬಂದಿದೆ, ಪ್ರಸ್ತುತ ವಿದ್ಯಮಾನಗಳನ್ನು ಅವಲೋಕಿಸಿ ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳಲು ಪರಿಶೀಲಿಸಲಾಗುವುದು. |

**ಇ- ಪಸಂಮೀ 30 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**